# ಕಾಣ್ಕೆ – ಕಣ್ಕಟ್ಟು

## ಹೊಸ ತಲೆಮಾರಿನ ಕಥನ



ಸುರೇಶ್ ನಾಗಲಮಡಿಕೆ

ಕನ್ನಡ ಸಣ್ಣಕಥೆಯ ಹೊಸ ಪಯಿರು

**ಒಂದು ಸಹೃದಯಿ ಸಮೀಕ್ಷೆ**

### ಪ್ರವೇಶಕ್ಕೆ ಮುನ್ನ

ಕನ್ನಡ ಕಥಾಜಗತ್ತಿನ ದಾರಿಗಳನ್ನು ಯಾವ ರೀತಿಯಲ್ಲಿ ಗುರುತಿಸಿದರೂ ಹಲ ಬಗೆಯ ಬಿಕ್ಕಟ್ಟುಗಳನ್ನು ಎದುರುಗೊಳ್ಳಬೇಕು. ಆರಂಭದಲ್ಲಿ ಚಳವಳಿಗಳ ಬೆನ್ನಲ್ಲಿ ಮತ್ತು ಮಾಸ್ತಿಯವರನ್ನು ಕೇಂದ್ರವಾಗಿಟ್ಟು ಕಥನದ ಹೆಜ್ಜೆಗಳನ್ನು ಕಂಡಿದ್ದು ಉಂಟು. ಈ ಹಾದಿಯನ್ನು ಸಂಪೂರ್ಣ ತಳ್ಳಿಹಾಕಲು ಸಾಧ್ಯವಿಲ್ಲದಿದ್ದರೂ, ವಿಶ್ಲೇಷಣೆಯ ಹಾದಿಯಲ್ಲಿ ಕೆಲ ಪ್ರಮಾದಗಳು ಆಗಿದ್ದುಂಟು. ಏಕೆಂದರೆ, ಯಾವ ಕಾಲದಲ್ಲೂ ಕಾಡುವ ಕಥೆಗಾರನೊಬ್ಬ ಜನಮಾನಸದಿಂದ ಪಲಾಯನವಾಗುವುದಿಲ್ಲ. ಕಥೆಗಾರನಿಗಿಂತ ಕಥೆಗೆ ಆ ಶಕ್ತಿ ದಕ್ಕುತ್ತದೆ. ಈ ನಿಟ್ಟಿನಲ್ಲಿ ಓದುಗನಿಗಿಂತ ವಿಶ್ಲೇಷಕ ವಿಚಿತ್ರವಾದ ಖೆಡ್ಡಾಕ್ಕೆ ಬೀಳುತ್ತಾನೆ. ಆತನಿಗೆ ಚೌಕಟ್ಟುಗಳೇ ಪ್ರಧಾನವಾಗುತ್ತವೆ. ಈ ಚೌಕಟ್ಟುಗಳ ಭೂತಕ್ಕೆ ಹೆದರಿ ಅನೇಕ ಕಥೆಗಳು ಕೇವಲ ಓದುಗರ ಮನಸ್ಸಿನಲ್ಲಿ ಮಾತ್ರ ಉಳಿಯಬಲ್ಲವು; ಅಂತಿಮವಾಗಿ ಇದೇ ಶಾಶ್ವತ. ಆದರೆ, ವಿಶ್ಲೇಷಕನೊಬ್ಬ ಚೌಕಟ್ಟಿಗೆ ಬಾರದಿದ್ದರೆ, ಅನೇಕ ಬಾರಿ ಎಡವುತ್ತಾನೆ. ಅಥವಾ ಬರೀ ವಿವರಗಳಲ್ಲಿ ಬೀಳುತ್ತಾನೆ. ಈ ದಾರಿಯಲ್ಲಿ ಕೊಂಚವಾದರೂ ತನ್ನ ಕಾಲಮಾನಕ್ಕೆ ಸ್ಪಂದಿಸುವ ಕಾರ್ಯವಂತೂ ನೆರವೇರುತ್ತದೆ. ಕಾಲ ಮತ್ತು ಬದುಕನ್ನು ಕಥೆಗಾರ ತನ್ನಲ್ಲಿ ಗರ್ಭೀಕರಿಸಿಕೊಂಡ ರೀತಿಯೇ ಇಲ್ಲಿ ಮುಖ್ಯವಾಗಬೇಕು. ಆಗ ತಲೆಮಾರುಗಳ ಪ್ರಶ್ನೆ ಎದುರಾದರೂ, ಸ್ವಲ್ಪ ಸ್ಪಷ್ಟತೆ ಲಭ್ಯವಾಗುತ್ತದೆ. ಕಥೆ ಒಂದು ರೀತಿಯಲ್ಲಿ 'ಹರಿಯುವ ನದಿಗೆ ಮೈಯೆಲ್ಲ ಕಾಲು' ಇದ್ದ ಹಾಗೆ. ಯಾವ ತಲೆಮಾರನ್ನು ಚರ್ಚಿಸಿದರೂ ಹರಿಯುವುದು ತಪ್ಪಿದ್ದಲ್ಲ. ಆದರೆ ನಾವು ಗ್ರಹಿಸಬೇಕಾದುದು ಅದರ ಮೈಯನ್ನು.